# ಈ ಲೇಖನದ ವಿಷಯಾನುಕ್ರಮಣಿಕೆ


| | |
|---|---|
| ಗುರು ದೇವತಾ ಅಭಿಷೇಕ | 2 |
| ಅಭಿಷೇಕದ ನೀರು | 3 |
| ಆರೋಹಣ ಕ್ರಮ | 4 |
| ಈ ಕ್ರಮದಲ್ಲಿ ವಹಿಸಬೇಕಾದ ಎಚ್ಚರ | 6 |
| ಅವರೋಹಣ ಕ್ರಮ | 7 |
| ದೇವತಾಪುಂಗವರು | 12 |
| ಮನೆಯಲ್ಲಿ ಇರಲೇಬೇಕಾದ ದೇವತಾಪ್ರತಿಮೆಗಳು | 13 |
| ಗುರು ಅಭಿಷೇಕ | 14 |
| ಶಂಖಾಭಿಷೇಕದ ಮಂತ್ರಗಳು | 16 |
| ಪ್ರಾಣದೇವರ ಅಭಿಷೇಕದ ಮಂತ್ರಗಳು | 17 |
| ಗರುಡ ಸ್ತೋತ್ರಗಳು | 18 |
| ತಾರ್ಕ್ಷ್ಯಸೂಕ್ತ 18 | |
| ಗರುಡಸ್ತೋತ್ರಗಳು 19 | |
| ಶೇಷಸ್ತೋತ್ರಗಳು | 20 |
| ರುದ್ರಸ್ತೋತ್ರಗಳು | 20 |
| ಗಣಪತಿಸ್ತೋತ್ರಗಳು | 21 |
| ದೇವತಾಸ್ತೋತ್ರಗಳು | 21 |
| ಗುರುಸ್ತೋತ್ರಗಳು | 22 |

# ವಿಶ್ವನಂದಿನಿ ಲೇಖನಮಾಲೆ — 251

## ಗುರು ದೇವತಾ ಅಭಿಷೇಕ

ಬ್ರಾಹ್ಮ ಮುಹೂರ್ತದಲ್ಲೆದ್ದು, ಶೌಚ ದಂತಧಾವನಗಳನ್ನು ಮುಗಿಸಿ, ಪ್ರಾತಃಸ್ತೋತ್ರ ಪಠಿಸುತ್ತ ದೇವರ ಮನೆಯನ್ನು ಸ್ವಚ್ಛ ಮಾಡಿ, ಸ್ನಾನ, ಜಲಾಹರಣ[1], ಊರ್ಧ್ವಪುಂಡ್ರಧಾರಣೆ, ಸಂಧ್ಯಾವಂದನೆಯನ್ನು ಮುಗಿಸಿ ನಿರ್ಮಾಲ್ಯವಿಸರ್ಜನೆ ಮಾಡುವವರೆಗಿನ ಪ್ರಕ್ರಿಯೆಯನ್ನು ತಿಳಿದೆವು.

ದೇವರ ಪೂಜೆಗೆ ಯಾವ ರೀತಿ ನೀರನ್ನು ತರಬೇಕು ಎನ್ನುವದನ್ನೂ ತಿಳಿದುಕೊಂಡೆವು.

ಈಗ ಗುರು ದೇವತೆಗಳ ಅಭಿಷೇಕದ ಕ್ರಮವನ್ನು ತಿಳಿಯೋಣ.

---

[1] ದೇವರ ಪೂಜೆಗಾಗಿ ನೀರನ್ನು ತರುವ ಕ್ರಮವನ್ನು ಜಲಾಹರಣ ಎನ್ನುತ್ತಾರೆ.

## ಅಭಿಷೇಕದ ನೀರು

ಮೊದಲಿಗೆ ಕಮಂಡಲು ಜಲದಿಂದ ಕೈ ತೊಳೆದುಕೊಂಡು, ಕರಶುದ್ಧಿವಸ್ತ್ರದಿಂದ ಒರೆಸಿಕೊಂಡು ದೊಡ್ಡ ಬಿಂದಿಗೆಯಿಂದ ಒಂದು ಕಲಶಕ್ಕೆ ನೀರನ್ನು ಹಾಕಿಕೊಳ್ಳಬೇಕು.

ಆ ಕಲಶದಿಂದ ಮತ್ತೊಂದು ಪಂಚಪಾತ್ರೆಗೆ ನೀರನ್ನು ಹಾಕಿಕೊಂಡು ಆ ಪಂಚಪಾತ್ರೆಯಿಂದ ಪ್ರತ್ಯೇಕ ಪ್ರತ್ಯೇಕವಾಗಿ ಅಭಿಷೇಕವನ್ನು ಮಾಡಬೇಕು.

ಗುರು ದೇವತೆಗಳ ಅಭಿಷೇಕದಲ್ಲಿ ಎರಡು ಪದ್ಧತಿಯಿದೆ. ಆರೋಹಣ ಕ್ರಮ ಮತ್ತು ಅವರೋಹಣಕ್ರಮ ಎಂದು. ಎರಡರಲ್ಲಿ ಯಾವುದು ಅನುಕೂಲವೋ ಅದನ್ನು ಮಾಡಬಹುದು.

## ಆರೋಹಣ ಕ್ರಮ

ಆರೋಹಣ ಎಂದರೆ ಹತ್ತುವದು. ಕೆಳಗಿನಿಂದ ಮೇಲೆ ಹೋಗುವದು.

ಕಿರಿಯಗುರುಗಳಿಗೆ ಮೊದಲು ಅಭಿಷೇಕ. ಆಮೇಲೆ ಹಿರಿಯ ಗುರುಗಳಿಗೆ.

ಕಿರಿಯ ದೇವತೆಗಳಿಗೆ ಮೊದಲು ಅಭಿಷೇಕ, ಆಮೇಲೆ ಹಿರಿಯ ದೇವತೆಗಳಿಗೆ.

ಮೊದಲು ನಾವು ಸ್ನಾನ ಮಾಡಿ ಗುರುಗಳಿಗೆ ಅಭಿಷೇಕ ಮಾಡುವಂತೆ,
ಕಿರಿಯ ಗುರು ದೇವತೆಗಳು ಮೊದಲು ಅಭಿಷಿಕ್ತರಾಗಿ ಅವರು ನಮ್ಮಿಂದ ಹಿರಿಯ ಗುರು ದೇವತೆಗಳಿಗೆ ಅಭಿಷೇಕ ಮಾಡಿಸುತ್ತಿದ್ದಾರೆ, ಕಡೆಯಲ್ಲಿ ಈ ಎಲ್ಲ ತತ್ವದೇವತೆಗಳು ನನ್ನಲ್ಲಿ ನಿಂತು ಶ್ರೀಹರಿಯ ಪೂಜೆ ಮಾಡಿಸುತ್ತಿದ್ದಾರೆ ಎಂಬ ಅನುಸಂಧಾನಕ್ಕಾಗಿ ಈ ಆರೋಹಣಕ್ರಮ.

ಮನೆಯಲ್ಲಿ ಶ್ರೀ ರಾಘವೇಂದ್ರತೀರ್ಥರು, ಶ್ರೀಮದ್ವಾದಿರಾಜರು, ಶ್ರೀಮಚ್ಚಂದ್ರಿಕಾಚಾರ್ಯರು,

ಶ್ರೀ ಶ್ರೀಪಾದರಾಜರು, ಶ್ರೀಮಟ್ಟೀಕಾಕೃತ್ಪಾದರು ಮುಂತಾದ ಗುರುಗಳ ಮೃತ್ತಿಕೆಯಾಗಲೀ ಅಥವಾ ಅವರ ಪ್ರತಿಮೆಯಾಗಲೀ ಇದ್ದಾಗ ಆಶ್ರಮದಲ್ಲಿ ಕಿರಿಯರಿಗೆ ಮೊದಲಿಗೆ ಅಭಿಷೇಕ ಮಾಡಿ ಆ ನಂತರ ಅಶ್ರಮದಲ್ಲಿ ಹಿರಿಯರಿಗೆ ಅಭಿಷೇಕ ಮಾಡಬೇಕು.

ಅಂದರೆ ಮೊದಲಿಗೆ ರಾಯರು, ಆ ನಂತರ ವಾದಿರಾಜರು, ಆ ನಂತರ ಚಂದ್ರಿಕಾಚಾರ್ಯರು, ಆ ನಂತರ ಟೀಕಾಕೃತ್ಪಾದರು ಹೀಗೆ.

ಆ ಬಳಿಕ ಗಣಪತಿಗೆ ಅಭಿಷೇಕ. ಆ ನಂತರ ಗರುಡ-ಶೇಷ-ರುದ್ರರಿಗೆ. ಆ ನಂತರ ಪ್ರಾಣದೇವರಿಗೆ. ಆ ನಂತರ ಶಂಖಕ್ಕೆ.

**ಲಕ್ಷ್ಮೀದೇವಿಯ ಪ್ರತಿಮೆಯಿದ್ದರೆ ಪ್ರತ್ಯೇಕವಾಗಿ ಅಭಿಷೇಕ ಸರ್ವಥಾ ಮಾಡಬಾರದು. ಶ್ರೀಹರಿಯ ಸಾಲಿಗ್ರಾಮ ಪ್ರತಿಮೆಗಳ ಜೊತೆಯಲ್ಲಿಯೇ ಅಭಿಷೇಕ ಮಾಡಬೇಕು.**

**ಶಂಖದಲ್ಲಿರುವ ಲಕ್ಷ್ಮೀದೇವಿಯ ಸನ್ನಿಧಾನ ಪೂಜಕ ರೂಪದ ಸನ್ನಿಧಾನ. ಅಂದರೆ ಶಂಖದಲ್ಲಿರುವ**

**ಲಕ್ಷ್ಮೀದೇವಿಯೇ ಶ್ರೀಹರಿಯನ್ನು ಪೂಜಿಸುತ್ತಾರೆ.** ಅದಕ್ಕಾಗಿ ಪ್ರಾಣದೇವರ ನಂತರ ಶಂಖಕ್ಕೆ ಅಭಿಷೇಕ.

## ಈ ಕ್ರಮದಲ್ಲಿ ವಹಿಸಬೇಕಾದ ಎಚ್ಚರ

**ಆರೋಹಣ ಕ್ರಮದಲ್ಲಿ ಅಭಿಷೇಕ ಮಾಡುವಾಗ ಒಂದು ಎಚ್ಚರವಿರಬೇಕು –**

ಪಂಚಪಾತ್ರೆಯಲ್ಲಿ ರಾಯರಿಗೆ, ಗಣಪತಿಗೆ ಅಭಿಷೇಕ ಮಾಡಿದ್ದೇವೆ. ಅದರಲ್ಲಿ ಉಳಿದ ನೀರಿನಿಂದ ವಾದಿರಾಜರಿಗೆ, ರುದ್ರದೇವರಿಗೆ ಅಭಿಷೇಕ ಮಾಡಬಾರದು. ಅರ್ಥಾತ್ ಕಿರಿಯರಿಗೆ ಮಾಡಿ ಉಳಿದ ನೀರಿನಿಂದ ಹಿರಿಯರಿಗೆ ಅಭಿಷೇಕ ವನ್ನು ಮಾಡಬಾರದು.

ಸಮಗ್ರ ಗುರು-ದೇವತೆಗಳ ಅಭಿಷೇಕ ಮುಗಿದಿದ್ದಲ್ಲಿ ವಿಸ್ತಾರವಾಗಿ ಪ್ರಾಣದೇವರಿಗೆ ವಾಯುಸ್ತುತಿ ಮಧ್ವವಿಜಯಗಳಿಂದ ಅಭಿಷೇಕ ಮಾಡಲೂ ಸಹ ಈ ಕ್ರಮದಲ್ಲಿ ಅನುಕೂಲವಿದೆ.

## ಅವರೋಹಣ ಕ್ರಮ

ಅಭಿಷೇಕ ಎಂದರೆ ಪೂಜೆ. ಮೊದಲು ಹಿರಿಯರಿಗೆ ಮಾಡಿ ನಂತರ ಕಿರಿಯರಿಗೆ ಮಾಡುತ್ತಿದ್ದೇವೆ ಎಂಬ ತಾರತಮ್ಯದ ಅನುಸಂಧಾನಕ್ಕಾಗಿ ಈ ಅವರೋಹಣ ಕ್ರಮ.

ಅವರೋಹಣ ಕ್ರಮದಲ್ಲಿ ಅಭಿಷೇಕ ಮಾಡಬೇಕಾದರೆ ಇರಬೇಕಾದ ಎಚ್ಚರ —

ಒಂದೇ ಸೋಮಸೂತ್ರದ ತಟ್ಟೆಯಲ್ಲಿ ಅಭಿಷೇಕ ಮಾಡುವದಿದ್ದರೆ, ಪ್ರತೀ ಅಭಿಷೇಕ ಮುಗಿದ ಬಳಿಕವೂ ಸೋಮಸೂತ್ರದ ತಟ್ಟೆಯನ್ನು ವರೆಸಬೇಕು.

ಇಲ್ಲದಿದ್ದಲ್ಲಿ ಪ್ರಾಣದೇವರಿಗೆ ಅಭಿಷೇಕ ಮಾಡಿದ ನಂತರ ಅದೇ ಸೋಮಸೂತ್ರದ ತಟ್ಟೆಯಲ್ಲಿ ಗರುಡಾದಿಗಳನ್ನು ಇಟ್ಟರೆ ಅಭಿಷೇಕ ಮಾಡಿದರೆ ಪ್ರಾಣದೇವರ ತೀರ್ಥದ ಮೇಲೆ ಅವರ ಕಾಲನ್ನಿರಿಸಿದಂತಾಗುತ್ತದೆ. ಮಹತ್ತರ ಅನರ್ಥಕ್ಕೆ ಕಾರಣವಾಗುತ್ತದೆ. ಹೀಗಾಗಿ ಎಚ್ಚರದಲ್ಲಿರಬೇಕು. ಸೋಮಸೂತ್ರವನ್ನು ವರೆಸಿ ಅಭಿಷೇಕ ಮಾಡಬೇಕು.

ಪ್ರತಿಯೊಬ್ಬ ದೇವತೆಯನ್ನೂ, ಗುರುಗಳನ್ನೂ ಬೇರೆಬೇರೆ ತಟ್ಟೆಯಲ್ಲಿಟ್ಟು ಅಭಿಷೇಕ ಮಾಡಿದರೆ ಈ ಸಮಸ್ಯೆ ಇರುವದಿಲ್ಲ.

ಅವರೋಹಣ ಕ್ರಮದಲ್ಲಿ ಒಬ್ಬರಿಗೆ ಅಭಿಷೇಕ ಮಾಡಿ ಪಂಚಪಾತ್ರೆಯಲ್ಲಿ ನೀರು ಉಳಿದರೆ ಅವಶ್ಯವಾಗಿ ಅದರಿಂದಲೇ ಅಭಿಷೇಕ ಮಾಡಬಹುದು.

ಮೊದಲಿಗೆ ಶಂಖ.

ಆ ನಂತರ ಪ್ರಾಣದೇವರು.

ಆ ನಂತರ ಗರುಡ, ಶೇಷ ರುದ್ರದೇವರು. (ಸಮಾನದೇವತೆಗಳಾದ್ದರಿಂದ ಒಂದೇ ತಟ್ಟೆಯಲ್ಲಿಟ್ಟು ಅಭಿಷೇಕ. ವಿಶೇಷ ಸೂಕ್ತಗಳಿಂದ ಅಭಿಷೇಕ ಮಾಡುವದಿದ್ದರೆ ಪ್ರತ್ಯೇಕವಾಗಿಯೂ ಮಾಡಬಹುದು. ತಪ್ಪಿಲ್ಲ)

ಆ ನಂತರ ಗಣಪತಿ.

(ಉಳಿದ ನಾರದ, ಕುಬೇರ ಮುಂತಾದ ದೇವತೆಗಳ ಪ್ರತಿಮೆಯನ್ನು ಪೂಜಿಸುತ್ತಿದ್ದಲ್ಲಿ ತಾರತಮ್ಯಾನುಸಾರಿಯಾಗಿಯೇ ಅಭಿಷೇಕ. ನಾರದರಿಗೆ ರುದ್ರದೇವರ ನಂತರ, ಗಣಪತಿಗಿಂತ ಮೊದಲು. ಕುಬೇರದೇವರಿಗೆ ಗಣಪತಿಗೆ ಸಮಾನವಾಗಿ. ಶನೈಶ್ಚರದೇವತೆಗೆ ಗಣಪತಿಯ ನಂತರ. ಹೀಗೆ ತಾರತಮ್ಯವನ್ನು ತಿಳಿದು ಅಭಿಷೇಕ ಮಾಡಬೇಕು. ಅರೋಹಣವಾಗಲೀ, ಅವರೋಹಣವಾಗಲೀ)

ಆ ನಂತರ ಪದ್ಮನಾಭತೀರ್ಥರು.

ಶ್ರೀಮಟ್ಟೀಕಾಕೃತ್ಪಾದರು.

ಶ್ರೀ ವಿಜಯಧ್ವಜತೀರ್ಥರು.

ಶ್ರೀ ಬ್ರಹ್ಮಣ್ಯತೀರ್ಥರು.

ಶ್ರೀ ಶ್ರೀಪಾದರಾಜರು.

ಶ್ರೀಮಚ್ಚಂದ್ರಿಕಾಚಾರ್ಯರು.

ಶ್ರೀಮದ್ವಾದಿರಾಜತೀರ್ಥರು.

ಶ್ರೀ ವಿಜಯೀಂದ್ರತೀರ್ಥರು.

ಶ್ರೀ ರಘೂತ್ತಮತೀರ್ಥರು.

ಶ್ರೀ ರಾಘವೇಂದ್ರತೀರ್ಥಗುರುಸಾರ್ವಭೌಮರು.

ದಾಸರಾಯರು.

ಈ ಕ್ರಮದಲ್ಲಿಯೇ ಅಭಿಷೇಕ ಮಾಡಬೇಕು.

ಯಾವುದೇ ಯತಿಗಳನ್ನು ಪೂಜಿಸುವದಿದ್ದಲ್ಲಿ ಯಾರು ಸಂನ್ಯಾಸವನ್ನು ಮೊದಲು ಸ್ವೀಕರಿಸಿದ್ದಾರೆಯೋ ಅವರು ಮೊದಲು, ಯಾರು ನಂತರ ಸ್ವೀಕರಿಸಿದ್ದಾರೆಯೋ ಅವರು ನಂತರ ಇದೇ ಕ್ರಮವನ್ನು ಅನುಸರಿಸಬೇಕು.

ಉದಾಹರಣೆಗೆ ಶ್ರೀ ವಿಜಯೀಂದ್ರತೀರ್ಥರಿಗೆ ರಾಯರಿಗಿಂತ ಮೊದಲು ಆಭಿಷೇಕ ಮಾಡಬೇಕು. ಶ್ರೀ ಶೇಷಚಂದ್ರಿಕಾಚಾರ್ಯರಿಗೆ ರಾಯರ ನಂತರ ಅಭಿಷೇಕ ಮಾಡಬೇಕು. ಹಾಗೆಯೇ ಮಾದನೂರಿನ

ಶ್ರೀ ವಿಷ್ಣುತೀರ್ಥರು ಶ್ರೀ ವ್ಯಾಸತತ್ವಜ್ಞರು ಮುಂತಾದ ಪ್ರಾತಃಸ್ಮರಣೀಯರಿಗೆ ಶ್ರೀ ರಾಯರ ನಂತರ ಅಭಿಷೇಕವನ್ನು ಮಾಡಬೇಕು.

ಮನೆಯಲ್ಲಿ ಇವರ ಮೃತ್ತಿಕೆ, ಪ್ರತಿಮೆ ಇಲ್ಲದಿದ್ದರೂ ಸಮಗ್ರ ಗುರುಗಳ ಚರಮಶ್ಲೋಕಗಳನ್ನು ಪಠಿಸಿ ದೇವರ ಪೂಜೆಯನ್ನು ಆರಂಭಿಸಬೇಕು. ಪೂಜೆ ಮಾಡುವ ಸಂದರ್ಭದಲ್ಲಿ ಭಗವಂತನಲ್ಲಿ ವಿಶೇಷ ಭಕ್ತಿ ಜ್ಞಾನಗಳನ್ನು ಕರುಣಿಸುವ ಗುರುಪುಂಗವರಿವರು.

ಶ್ರೀಮದಾಚಾರ್ಯರ ಯಾವ ಪರಮಪವಿತ್ರ ಪರಂಪರೆ ನಿಮ್ಮ ಕುಲಗುರು ಪರಂಪರೆಯೋ ಆ ಪರಂಪರೆಯ ಗುರುಗಳನ್ನು ಅವಶ್ಯವಾಗಿ ಸ್ಮರಿಸಬೇಕು.

ಆ ನಂತರ ವಿಶೇಷಗ್ರಂಥಗಳ ರಚನೆಯನ್ನು ಮಾಡಿ ಪರಮಾನುಗ್ರಹಗೈದ ಮಹಾನುಭಾವರ ಸ್ಮರಣೆಯನ್ನು ಅತ್ಯವಶ್ಯವಾಗಿ ಮಾಡಬೇಕು. **ವಿಶೇಷವಾಗಿ ಶ್ರೀ ವಿಜಯದಾಸಾರ್ಯರ ಸ್ಮರಣೆಯನ್ನು ಮಾಡಿಯೇ ಪೂಜೆ ಮಾಡಬೇಕು.**

**ವಿಜಯರಾಯರ ಸ್ಮರಣೆ ಮಾಡಿ ಆರಂಭಿಸುವ ಪೂಜೆಯಲ್ಲಿ ವಿಶೇಷ ಅನುಸಂಧಾನಗಳು ಅಪ್ರಯತ್ನವಾಗಿ ಮನಸ್ಸಿಗೆ ತೋರುವದು ಸಾವಿರಾರು ಜನ ಸಾತ್ವಿಕ ಜನರ ಅನುಭವ.**

## ದೇವತಾಪುಂಗವರು

ಮುಕ್ತಿಯೋಗ್ಯ ಜೀವರಾಶಿಗಳಲ್ಲಿ ಐದು ಗುಂಪುಗಳಿವೆ. ದೇವತೆಗಳು, ಋಷಿಗಳು, ಪಿತೃಗಳು, ಚಕ್ರವರ್ತಿಗಳು ಮತ್ತು ಮನುಷ್ಯೋತ್ತಮರು ಎಂದು.

ಇವರನ್ನು ಸ್ಮರಿಸಿಯೇ ಪೂಜೆ ಆರಂಭಿಸಬೇಕು.

ಇವರೆಲ್ಲರ ಪ್ರತಿಮೆ ಇರಲೇಬೇಕಾಗಿಲ್ಲ. ಆದರೆ ಸ್ಮರಣೆಯಂತೂ ಅವಶ್ಯವಾಗಿ ಮಾಡತಕ್ಕದ್ದು.

ವಂದೇ ವಿಷ್ಣುಂ ನಮಾಮಿ ಎಂದು ಆರಂಭವಾಗುವ ಐದು ಶ್ಲೋಕಗಳ ತಾರತಮ್ಯಸ್ತೋತ್ರವನ್ನು ಪಠಿಸಿದಲ್ಲಿ ಸಮಸ್ತ ಸ್ತೋತ್ತಮರ ಸ್ಮರಣೆಯನ್ನು ಮಾಡಿದಂತಾಗುತ್ತದೆ.

# ಮನೆಯಲ್ಲಿ ಇರಲೇಬೇಕಾದ ದೇವತಾಪ್ರತಿಮೆಗಳು

ಪರಮಾತ್ಮನ ಏಕಾಂತ ಭಕ್ತರಾದ ಗರುಡದೇವರು, ಶೇಷದೇವರ ಪ್ರತಿಮೆಗಳು ಇರಲೇಬೇಕು. ರುದ್ರದೇವರ ಲಿಂಗವಾಗಲೀ ಅಥವಾ ಪ್ರತಿಮೆಯಾಗಲೀ ಇರಬೇಕು.

ಹಾಗೆ ಸರ್ವವಿಘ್ನನಿವಾರಕರಾದ ಗಣಪತಿಯ ಪ್ರತಿಮೆಯೂ ಇರಲೇಬೇಕು.

ಕಾಮಧೇನುವಿನ ಪ್ರತಿಮೆ ಇದ್ದಲ್ಲಿ ಗಣಪತಿಯ ನಂತರ ಗಂಗೆಗಿಂತ ಮೊದಲು ಪೂಜಿಸಬೇಕು.

ಗಂಗಾದಿ ತೀರ್ಥಗಳನ್ನು ಅದರ ಥಾಲಿಯಲ್ಲಿಟ್ಟು ಪೂಜಿಸುವದು ಶ್ರೇಷ್ಠಕ್ರಮ.

## ಗುರು ಅಭಿಷೇಕ

ಯಾವುದೇ ಗುರುಗಳಿಗೆ ಅಭಿಷೇಕ ಮಾಡಬೇಕಾದರೆ ಅವರ ಚರಮಶ್ಲೋಕ ಅಥವಾ ಅವರ ಸ್ತೋತ್ರದಿಂದ ಅಭಿಷೇಕ ಮಾಡಬೇಕು.

ಎಲ್ಲ ಗುರುಗಳಲ್ಲಿಯೂ ಈ ಕೆಳಕಂಡ ಪ್ರಾರ್ಥನೆಯನ್ನು ಅವಶ್ಯವಾಗಿ ಮಾಡಬೇಕು.

**ಸಂಸಾರೇಕ್ಷಯಸಾಗರೇ**
**ಪ್ರಕೃತಿತೋಗಾಧೇ ಸದಾ ದುಸ್ತರೇ**
**ಸರ್ವಾವದ್ಯಜಲಗ್ರಹೈಃ**
**ಅನುಪಮೈಃ ಕಾಮಾದಿಭಂಗಾಕುಲೇ**
**ನಾನಾವಿಭ್ರಮದುರ್ಭ್ರಮೇಽ-**
**ಮಿತಭಯಸ್ತೋಮಾದಿಫೇನೋತ್ಕಟೇ**
**ದುಃಖೋತ್ಕೃಷ್ಟವಿಷೇ**
**ಸಮುದ್ಧರ ಗುರೋ ಮಾ ಮಾಗ್ನರೂಪಂ ಸದಾ**

ಗುರುಗಳ ಮೃತ್ತಿಕೆಯುಳ್ಳ ವೃಂದಾವನ ಅಥವಾ ಸಂಪುಷ್ಟವನ್ನು, ಅಥವಾ ಪ್ರತೀಕವನ್ನು ಸೋಮಸೂತ್ರದ ತಟ್ಟೆಯಲ್ಲಿಟ್ಟು ಮೊದಲು

ನಿರ್ಮಾಲ್ಯ ಅಭಿಷೇಕವನ್ನು ಮಾಡಬೇಕು. ಆ ನಂತರ ಅಭಿಷೇಕವನ್ನು ಮಾಡಬೇಕು.

ಗುರುಗಳ ನಿರ್ಮಾಲ್ಯತೀರ್ಥವನ್ನು ಪ್ರೋಕ್ಷಣೆ ಮಾಡಿಕೊಳ್ಳಲು ಇಟ್ಟುಕೊಳ್ಳಬೇಕು.

ಗುರುಗಳ ಅಭಿಷೇಕತೀರ್ಥವನ್ನು ಪಾದೋದಕವನ್ನಾಗಿ ಸ್ವೀಕರಿಸಲು ಇಟ್ಟುಕೊಳ್ಳಬೇಕು.

ಏಕಾದಶಿಯ ದಿವಸ ಪಾದೋದಕವನ್ನು ಸ್ವೀಕರಿಸಬಾರದು.

ಶ್ರೀಮದಾಚಾರ್ಯರ ಪರಂಪರೆಯ ಪರಿಶುದ್ಧ ಕ್ರಮದ ತಿಳುವಳಿಕೆಯಿಲ್ಲದ ಕೆಲವರು, “ಗುರುಗಳ ಪಾದೋದಕವನ್ನು ಮತ್ತು ಹಸ್ತೋದಕವನ್ನು ಸ್ವೀಕರಿಸಬಾರದು” ಎಂದು ಆಕ್ಷೇಪ ಮಾಡುತ್ತಾರೆ. ಹಸ್ತೋದಕ, ಪಾದೋದಕಗಳನ್ನು ಸ್ವೀಕರಿಸಲೇ ಬೇಕು ಎಂಬ ವಿಷಯವನ್ನು ತೀರ್ಥಸ್ವೀಕಾರ ಮತ್ತು ಭೋಜನದ ಪ್ರಕರಣದಲ್ಲಿ ಪ್ರಮಾಣಯುಕ್ತವಾಗಿ ಪ್ರತಿಪಾದಿಸಿ ನೀಡುತ್ತೇನೆ.

## ಶಂಖಾಭಿಷೇಕದ ಮಂತ್ರಗಳು

ಶ್ರೀಸೂಕ್ತ, ದುರ್ಗಾಸೂಕ್ತಾದಿಗಳು.

“ವಿಶ್ವಸ್ಥಿತಿಪ್ರಲಯಸರ್ಗ” ಎಂದು ಆರಂಭವಾಗುವ ದ್ವಾದಶಸ್ತೋತ್ರದ ಏಳನೆಯ ಅಧ್ಯಾಯ.

ಪುರಾಣಗಳಲ್ಲಿ ಬಂದಿರುವ ಲಕ್ಷ್ಮೀಹೃದಯ ಇತ್ಯಾದಿ ಲಕ್ಷ್ಮೀಸ್ತೋತ್ರಗಳು.

ಶ್ರೀಮದ್ವಾದಿರಾಜಗುರುಸಾರ್ವಭೌಮರು ರಚಿಸಿದ ಶ್ರೀಶ್ರೀಶಗುಣದರ್ಪಣ.

ಶ್ರೀಮಾದನೂರಿನ ವಿಷ್ಣುತೀರ್ಥರು ರಚಿಸಿದ ರಮಾಸ್ತೋತ್ರ.

ಶ್ರೀ ವಿದ್ಯಾರತ್ನಾಕರತೀರ್ಥರು ರಚಿಸಿರುವ

ಶ್ರೀ ಯಾದವಾರ್ಯರು ರಚಿಸಿರುವ ಲಕ್ಷ್ಮೀಸ್ತೋತ್ರ ಮುಂತಾದ ಸ್ತೋತ್ರಗಳನ್ನು ಪಠಿಸಬಹುದು.

## ಪ್ರಾಣದೇವರ ಅಭಿಷೇಕದ ಮಂತ್ರಗಳು

ಶ್ರೀ ತ್ರಿವಿಕ್ರಮಪಂಡಿತಾಚಾರ್ಯವಿರಚಿತ ಶ್ರೀ ವಾಯುಸ್ತುತಿ. ಕಾಮನಿಗ್ರಹ, ಸಂಪತ್ಪ್ರಾಪ್ತಿ, ಅಭೀಷ್ಟಪ್ರಾಪ್ತಿ, ಜ್ಞಾನಭಕ್ತಿವೈರಾಗ್ಯಗಳ ಪ್ರಾಪ್ತಿ ಹಾಗೂ ಅಪರೋಕ್ಷಜ್ಞಾನ ಮುಕ್ತಿಗಳಿಗೆ ಸಾಧನವಾದ ಮಂತ್ರತುಲ್ಯವಾದ ಸಿದ್ಧಸ್ತೋತ್ರ ವಾಯುಸ್ತುತಿ.

ಶ್ರೀ ಬಳಿತ್ಥಾಸೂಕ್ತ, ಪವಮಾನಸೂಕ್ತ, ಮನ್ಯುಸೂಕ್ತಗಳು.

ಶ್ರೀ ಮಧ್ವವಿಜಯ. ದಿವಸಕ್ಕೊಂದು ಸರ್ಗದಂತೆ ಪಠಿಸುತ್ತ ಅಭಿಷೇಕ ಮಾಡುವದರಿಂದ ಮಧ್ವಶಾಸ್ತ್ರದ ಅಧ್ಯಯನದ ಅರ್ಹತೆ ಲಭಿಸುತ್ತದೆ.

ಪುರಾಣಗಳಲ್ಲಿ ಬಂದಿರುವ ವಾಯುಸ್ತೋತ್ರಗಳು ಹಾಗೂ ತ್ರಿವಿಕ್ರಮಪಂಡಿತಾಚಾರ್ಯರೇ ಮೊದಲಾದ ಗುರುವರೇಣ್ಯರು ರಚಿಸಿರುವ ಮಧ್ವಾಷ್ಟಕ ಮುಂತಾದ ಮಧ್ವಸ್ತೋತ್ರಗಳು.

# ಗರುಡ ಸ್ತೋತ್ರಗಳು

## ತಾರ್ಕ್ಷ್ಯಸೂಕ್ತ

ಋಗ್ವೇದದ ಹತ್ತನೆಯ ಮಂಡಲದ 178ನೆಯ ಸೂಕ್ತ ತಾರ್ಕ್ಷ್ಯ ಸೂಕ್ತ. ತಾರ್ಕ್ಷ್ಯ ಎಂದರೆ ಗರುಡ.

ಸ್ವಯಂ ಗರುಡದೇವರನ್ನೇ ಮಗನನ್ನಾಗಿ ಪಡೆದ ಅರಿಷ್ಟನೇಮಿಯೇ ಈ ಸೂಕ್ತವನ್ನು ಕಂಡುಕೊಂಡ ಋಷಿ.

ತ್ರಿಷ್ಟುಪ್ ಛಂದಸ್ಸಿನ ಮೂರು ಮಂತ್ರಗಳಿರುವ ಈ ಸೂಕ್ತದಲ್ಲಿ ಗರುಡದೇವರ ಮಹಾಮಾಹಾತ್ಮ್ಯದ ಚಿಂತನೆಯೊಂದಿಗೆ ಅವರನ್ನು ನಮ್ಮ ಮನೆಗೆ ಮನಸ್ಸಿಗೆ ಆಹ್ವಾನಿಸುವ ದಿವ್ಯಪ್ರಾರ್ಥನೆಗಳಿವೆ.

ಗುರುಗಳಿಂದ ಈ ಸೂಕ್ತದ ಉಪದೇಶವನ್ನು ಪಡೆದ ಬಳಿಕವೇ ಇದನ್ನು ಪಠಿಸಬೇಕು. ಪುಸ್ತಕ ನೋಡಿ ಪಠಿಸಬಾರದು. ಹಾಗೆಯೇ ಶ್ರೀಮದಾಚಾರ್ಯರು ತಂತ್ರಸಾರಸಂಗ್ರಹದಲ್ಲಿ ತಿಳಿಸಿರುವ

ಗರುಡಪಂಚಾಕ್ಷರಿಯ ಉಪದೇಶವನ್ನು ಆ ಮಂತ್ರದ ಜಪ ಮಾಡುವ ಗುರುಗಳಿಂದ ಪಡೆದು ಜಪಿಸುತ್ತ ಅಭಿಷೇಕ ಮಾಡಬಹುದು.

## ಗರುಡಸ್ತೋತ್ರಗಳು

ಮಹಾಭಾರತದ ಆದಿಪರ್ವದಲ್ಲಿ ದೇವತೆಗಳು ಮಾಡಿರುವ ಗರುಡಸ್ತೋತ್ರವಿದೆ. ಗರುಡದೇವರನ್ನೂ ಮತ್ತು ಅಂತರ್ಯಾಮಿಯಾದ ಭಗವಂತನನ್ನೂ ತಿಳಿಸುವ ಉತ್ತಮ ಸ್ತೋತ್ರ.

ಗರುಡದೇವರ ಹನ್ನೆರಡು ಹೆಸರುಗಳನ್ನು ತಿಳಿಸುವ ಗರುಡದ್ವಾದಶನಾಮಸ್ತೋತ್ರ.

ಗರುಡದೇವರ ಮಾಹಾತ್ಮ್ಯವನ್ನು ಚಿತ್ರಿಸುವ ವಸುಕೃತವಾದ ಗರುಡಸ್ತೋತ್ರ.

ಇವುಗಳನ್ನು ಕಲಿತು ಪಠಿಸಬಹುದು.

## ಶೇಷಸ್ತೋತ್ರಗಳು

ಋಗ್ವೇದದಲ್ಲಿ ಬಂದಿರುವ ಪ್ರಸಿದ್ಧವಾದ ಸರ್ಪಸೂಕ್ತ, ಆಚಾರ್ಯರು ತಂತ್ರಸಾರಸಂಗ್ರಹದಲ್ಲಿ ತಿಳಿಸಿರುವ ಶೇಷಷಡಕ್ಷರಮಂತ್ರ, ದ್ವಾದಶಸ್ತೋತ್ರದಲ್ಲಿ ಬಂದಿರುವ ಶೇಷಸ್ತುತಿ, ಶೇಷದ್ವಾದಶನಾಮಸ್ತೋತ್ರ, ಪುರಾಣಗಳಲ್ಲಿ ಬಂದಿರುವ ಶೇಷಸ್ತೋತ್ರಗಳು, ಶ್ರೀ ವಾದಿರಾಜಗುರುಸಾರ್ವಭೌಮರು ರಚಿಸಿರುವ ಶೇಷಸ್ತುತಿಗಳನ್ನು ಪಠಿಸಬಹುದು.

## ರುದ್ರಸ್ತೋತ್ರಗಳು

ಯಜುರ್ವೇದದಲ್ಲಿ ರುದ್ರಪ್ರಶ್ನ, ಚಮಕ, ವೇದಗಳಲ್ಲಿ ವಿಪುಲವಾಗಿ ದೊರೆಯುವ ರುದ್ರಮಂತ್ರಗಳು, ಆಚಾರ್ಯರು ತಿಳಿಸಿರುವ ಶಿವಪಂಚಾಕ್ಷರೀ, ಭಾಗವತದಲ್ಲಿ ಶಿವಸ್ತುತಿಗಳು, ಪುರಾಣಗಳಲ್ಲಿ ಸಮೃದ್ಧವಾಗಿ ದೊರೆಯುವ ಶಿವಾಷ್ಟೋತ್ತರನಾಮಗಳು, ಶಿವಸಹಸ್ರನಾಮಗಳು, ಶ್ರೀ

ನಾರಾಯಣಪಂಡಿತಾಚಾರ್ಯರು, ಶ್ರೀ ಚಂದ್ರಿಕಾಚಾರ್ಯರು, ಶ್ರೀ ವಾದಿರಾಜಗುರುಸಾರ್ವಭೌಮರು ಮುಂತಾದ ಮಹಾನುಭಾವರು ರಚಿಸಿರುವ ಶಿವಸ್ತುತಿಗಳು ಮುಂತಾದವನ್ನು ಕಲಿತು ಪಠಿಸಬಹುದು.

## ಗಣಪತಿಸ್ತೋತ್ರಗಳು

ಗಣಪತ್ಯಥರ್ವಶೀರ್ಷ, ಗಣಪತಿಮಂತ್ರಗಲು, ಆಚಾರ್ಯರು ತಿಳಿಸಿರುವ ಗಣಪತಿಮಂತ್ರ, ಪುರಾಣಗಳಲ್ಲಿನ ಗಣಪತಿಸ್ತೋತ್ರಗಳು ಶ್ರೀವಾದಿರಾಜಗುರುಸಾರ್ವಭೌಮರು ರಚಿಸಿರುವ ಗಣಪತಿಸ್ತೋತ್ರಗಳು ಮುಂತಾದವನ್ನು ಪಠಿಸಬೇಕು.

## ದೇವತಾಸ್ತೋತ್ರಗಳು

ದೇವತೆಗಳ, ಮುಖ್ಯವಾಗಿ ದಿಕ್ಪಾಲಕರ, ಗಂಗಾದಿ ದೇವತೆಗಳ ಕುರಿತಾಗಿ ಪುರಾಣಗಳಲ್ಲಿ ದೊರೆಯುವ ಸ್ತೋತ್ರಗಳು ಮಹಾನುಭಾವರು ರಚಿಸಿರುವ ಸ್ತೋತ್ರಗಳು ದೊರೆಯುತ್ತವೆ. ಅವನ್ನು ಪಠಿಸತಕ್ಕದ್ದು.

## ಗುರುಸ್ತೋತ್ರಗಳು

ಶ್ರೀ ವೇದವ್ಯಾಸದೇವರಿಂದ ಆರಂಭಿಸಿ ಸಮಸ್ತ ಗುರುಪರಂಪರೆಯ ಸ್ತೋತ್ರಗಳು ಸಮೃದ್ಧವಾಗಿ ದೊರೆಯುತ್ತವೆ. ಆಯಾಯ ಗುರುಗಳ ಸ್ತೋತ್ರಗಳನ್ನು ವಿಶೇಷವಾಗಿ ಪಠಿಸತಕ್ಕದ್ದು.

ಶ್ರೀ ವಿದ್ಯಾರತ್ನಾಕರತೀರ್ಥಶ್ರೀಪಾದಂಗಳವರು ರಚಿಸಿರುವ ಹರಿಗುರುಮಂಗಳಾಷ್ಟಕ ಸಿದ್ಧಿಪ್ರದವಾದ ಗುರುಸ್ತೋತ್ರ. ಮೂಲಗೋಪಾಲಕೃಷ್ಣ, ಆಚಾರ್ಯರಿಂದ ಆರಂಭಿಸಿ ಶ್ರೀ ವಿದ್ಯಾಸಮುದ್ರತೀರ್ಥಶ್ರೀಪಾದಂಗಳವರ ವರೆಗಿನ ಸ್ಮರಣೆ ಒಂದೇ ಸ್ತೋತ್ರದಲ್ಲಾಗುತ್ತದೆ. ಶ್ರೀಮದ್ ವ್ಯಾಸರಾಜಸಂಸ್ಥಾನದ ಭಕ್ತರು ಅದನ್ನು ಅವಶ್ಯವಾಗಿ ಪಠಿಸಬೇಕು. ಹಾಗೆಯೇ ಶ್ರೀ ವಿದ್ಯಾಸಮುದ್ರತೀರ್ಥರ ಕಾಲದಲ್ಲಿ ರಚಿತವಾದ ಮತ್ತೊಂದು ಗುರುಪರಂಪರಾಸ್ತೋತ್ರವಿದೆ. ನಮ್ಮ ಮಠದ ಶ್ರೀ ಮರುತಾಚಾರ್ಯರು ಈ ರೀತಿಯ ಸ್ತೋತ್ರಗಳನ್ನು  ಸಂಗ್ರಹಿಸಿ ಅಪೂರ್ವಸ್ತೋತ್ರಸಂಗ್ರಹ ಎಂಬ ಕೃತಿಯನ್ನು ಪ್ರಕಟಮಾಡಿದ್ದಾರೆ.

ಶ್ರೀರಾಘವೇಂದ್ರಮಠದ ಶ್ರೀ ವಸುಧೇಂದ್ರತೀರ್ಥ-ಶ್ರೀಪಾದಂಗಳವರು ತಮ್ಮ ಗುರುಗಳವರೆಗೆ ಎಲ್ಲರನ್ನೂ ಸ್ಮರಿಸುವ ಗುರುಪರಂಪರಾಸ್ತೋತ್ರವನ್ನು ರಚಿಸಿದ್ದಾರೆ. ರಾಯರ ಮಠದಿಂದ ಪ್ರಕಾಶಿತವಾಗಿರುವ ಸ್ತೋತ್ರಮುಕ್ತಾವಲಿ ಈ ರೀತಿಯ ಎಲ್ಲ ಸ್ತೋತ್ರಗಳ ಸಮುದ್ರವಾಗಿದೆ.

ಹಾಗೆಯೇ ಶ್ರೀಮದುಡುಪಿಯ ಅಷ್ಟಮಠಗಳು, ಶ್ರೀಪಾದರಾಜಮಠ, ಶ್ರೀ ಮಾಧವತೀರ್ಥಮಠ, ಶ್ರೀ ಅಕ್ಷೋಭ್ಯತೀರ್ಥರಮಠಗಳ ಪರಂಪರೆಯ ಸ್ತೋತ್ರಗಳನ್ನು ಪಡೆದುಕೊಂಡು, ದೊರೆಯದಿದ್ದಲ್ಲಿ ಹರಿಗುರುಭಕ್ತರಾದ ವಿದ್ವಾಂಸರಿಂದ ಬರೆಯಿಸಿಕೊಂಡು ಆಯಾಯ ಗುರುಪರಂಪರೆಯನ್ನು ನಿತ್ಯಸ್ಮರಿಸತಕ್ಕದ್ದು. ಯಾವ ಗುರುಪರಂಪರೆಗೆ ನೀವು ಸೇರಿದ್ದೀರೋ ಆ ಪರಂಪರೆಯನ್ನಂತೂ ನಿತ್ಯದಲ್ಲಿಯೂ ಸ್ಮರಿಸಲೇಬೇಕು.

ಮಾಧ್ವಜ್ಞಾನಿಗಳು ಮಾಡಿರುವ ಮತ್ತು ಪುರಾಣವಾಙ್ಮಯದಲ್ಲಿ ದೊರೆಯುವ ಸ್ತೋತ್ರಗಳನ್ನು ನಮ್ಮ ಕಾಲಕ್ಕೆ ಉತ್ತಮ ಕ್ರಮದಲ್ಲಿ

ಸಂಗ್ರಹ ಮಾಡಿರುವವರು ಶ್ರೀ ವ್ಯಾಸನಕೆರೆ ಪ್ರಭಂಜನಾಚಾರ್ಯರು. ಅವರ ಸ್ತೋತ್ರಮಾಲಿಕಾ ಪುಸ್ತಕಗಳನ್ನು ಈ ವಿಷಯಕ್ಕೆ ಅವಲೋಕಿಸಿ.

ಮುಂದಿನ ಲೇಖನದಲ್ಲಿ ಗುರುದೇವತೆಗಳ ಅಭಿಷೇಕದ ಸಂಕ್ಷಿಪ್ತ, ಅತೀಸಂಕ್ಷಿಪ್ತ, ವಿಸ್ತೃತ, ಸುವಿಸ್ತೃತ ಮತ್ತು ಪರಿಪೂರ್ಣ ಕ್ರಮಗಳನ್ನು ತಿಳಿಸುತ್ತೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು
ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,
ಶ್ರೀ ವೇದವ್ಯಾಸದೇವರಿಗೆ
ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491